ಆಗ ಪ್ರಭುಶಂಕರ ಅವರು, 'ಹಾಗೆ ಕೂಗುವುದು ಅವರ ಮೌಢ್ಯ... ಸರಿ, ಆದರೆ ತಾವು ರಾಮಕೃಷ್ಣಾಶ್ರಮಕ್ಕೆ ಹೋಗಿ ಕಣ್ಣುಮುಚ್ಚಿ ಕೂರುತ್ತೀರಲ್ಲಾ... ಅದೇನು?' ಎಂದರಂತೆ. ಆಗ ಕುವೆಂಪು ನಕ್ಕು, 'ಅದು ಸರಿ ಅನ್ನು' ಎಂದು ಹೇಳಿ ಸುಮ್ಮನಾದರಂತೆ.

ತಮ್ಮ ಸುತ್ತ ಏನೆಲ್ಲ ಅನ್ಯಾಯ, ಅಕ್ರಮಗಳು ನಡೆಯುತ್ತಿದ್ದರೂ ಅವರು ಎಂದೂ ನಿರಾಶಾವಾದಿಯಾಗಿ ಮಾತನಾಡುತ್ತಿರಲಿಲ್ಲ. ಸಮಾಜದ ಎಲ್ಲ ಸ್ತರದ ಜನ ಈಗ ತಾನೇ ಅರಿವಿಗೆ ಕಣ್ಣು ತೆರೆಯುತ್ತಿದ್ದಾರೆ. ಕೆಲ ದಿನಗಳು ಸಹಜವಾಗಿಯೇ, ಅಷ್ಟಿಷ್ಟು ಗೊಂದಲಗಳು ಇರುತ್ತವೆ. ನಿದ್ದೆಯಿಂದ ಎದ್ದ ತಕ್ಷಣ ಕ್ಷಣಕಾಲ ದಾರಿ ಅಸ್ಪಷ್ಟವಾಗಿ ಕಾಣುವುದಿಲ್ಲವೇ ಹಾಗೆ. ಮುಂದೆ ಖಂಡಿತ ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳುತ್ತಾ ತಾವೇ ರಚಿಸಿದ 'ಅಂಗುಲಿಮಾಲ' ನಾಟಕದಲ್ಲಿ ಬುದ್ಧ ಆನಂದನಿಗೆ ಹೇಳುವ ಈ ಮಾತನ್ನು ಉಲ್ಲೇಖಿಸುತ್ತಿದ್ದರು. (ಇದು ಅಂಗುಲಿಮಾಲನ ಮನಃ ಪರಿವರ್ತನೆಯ ಸಂದರ್ಭದಲ್ಲಿ ಬರುವಂತದು).

ನಿಲ್ಲುವುದು ಆನಂದ, ಇಂದಲ್ಲ, ನಾಳೆ ದಿನ
ಅಲ್ಲದಿರೆ ಎನಿತೊ ಯುಗಗಳ ಬಳಿಕ ಕೊಲ್ಲುತಿಹ
ಕೈಗಳಿವು ಕೊಲೆಯ ಕಲೆಯನು ಮರೆತು, ಒಂದೊಂದು
ಜೀವನವನು ಪೂಜಿಪುದನರಿಯುವುದು ಆನಂದ.
ಇಂದಲ್ಲದಿರೆ ನಾಳೆ ತನ್ನ ಕೃತ್ಯಕ್ಕೆ ತಾನೆ ನಾಚುವುದ
ಕಲಿಯುವನು ಮಾನವನು, ಅದುವರೆಗು ಶಾಂತ ಭಾ–
ವವ ತಳೆದು, ಎದೆಯೊಲವನೇ ನಂಬಿ, ಜೀವ ಜೀ
ವದ ಬಳಿಗೆ ಪ್ರೇಮಯಾತ್ರೆಯ ನಡೆದು, ಒಲಿವುದನು
ಕಲಿಸುವುದು ಪರಮ ಪೂಜೆಯು ನಮಗೆ.'

ಇದು ಬುದ್ಧನ ಮಾತಾಗಿರದೆ, ಪ್ರಭುಶಂಕರ ಅವರ ಮನದಾಳದ ಮಾತೂ ಆಗಿತ್ತು ಎನ್ನುವುದು ಅವರನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

## ಮಲೆಯೂರು ಗುರುಸ್ವಾಮಿ

ಲೇಖಕರು ಚಾಮರಾಜನಗರದ ಮಲೆಯೂರು ಗ್ರಾಮದವರು. ಚಾಮರಾಜನಗರದಲ್ಲಿ ಆರಂಭಿಕ ಶಿಕ್ಷಣ ಹಾಗೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ. 'ಮಹಾಯಾತ್ರಿಕ', 'ಅಪ್ರತಿಮವೀರ', 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಕಾದಂಬರಿಗಳು. 'ಮಾತೆಂಬುದು ಜ್ಯೋತಿರ್ಲಿಂಗ ವಚನ ಸಾಹಿತ್ಯ', 'ಶ್ರೀ ಕಾರ್ಯಸ್ವಾಮಿ ಮಠದ ಕ್ಷೇತ್ರ ಚರಿತ್ರೆ', 'ಶರಣ ಕಿರಣ ವ್ಯಕ್ತಿ ಚಿತ್ರ', 'ಪ್ರಭುಲಿಂಗ ಲೀಲೆ', 'ಮೂಡಲ ಸೀಮೆಯ ಕತೆಗಳು', 'ಕಾಡಂಚಿನ ಕೋಗಿಲೆಗಳ ಕಲರವ', 'ಕಪಿಲಾ ನದಿಯ ಎಡಬಲದಿ' ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ವಿದುಷಿ ಬೆಂಗಳೂರು ನಾಗರತ್ನಮ್ಮ ಅವರ ಬದುಕನ್ನು ಆಧರಿಸಿದ 'ಕಪಿಲೆ ಹರಿದಳು ಕಡಲಿಗೆ' ಕಾದಂಬರಿಯನ್ನು ಹೊರತಂದಿದ್ದಾರೆ.